

ರೇಷ್ಮೆ, ಕಾಟನ್, ಸಿಂಥೆಟಿಕ್ ಫ್ಯಾಬ್ರಿಕ್‌ಗಳಲ್ಲಿ ಥರಾವರಿ ಉಡುಪುಗಳನ್ನು ಧರಿಸಿ ಮೆರೆಯುವ ಕಾಲ ಇದಾದರೂ, ಇದೀಗ ಹೊಸ ಸೇರ್ಪಡೆಯಾಗಿದೆ ಲೆದರ್ ಉಡುಪುಗಳು. ಲೆದರ್ ಉಡುಪುಗಳಿಗೆ ಫ್ಯಾಷನ್ ಲೋಕದಲ್ಲಿ ಮಹತ್ವದ ಸ್ಥಾನ ಈಗ ದೊರಕಿದೆ. ಇದು ಎಂಬತ್ತರ ದಶಕದ ಫ್ಯಾಷನ್ ಆಗಿತ್ತು. ಅದು ಸ್ವಲ್ಪ ಕಾಲ ತೆರೆಮರೆಗೆ ಸರಿದಿತ್ತು. ಮೊದಲೆಲ್ಲ ಬರೀ ಪರ್ಸ್, ಬ್ಯಾಗ್, ಬೆಲ್ಟ್, ಶೂಗಳಿಗೆ ಸೀಮಿತವಾಗಿದ್ದ ಲೆದರ್ ಈಗ ಉಡುಪುಗಳ ಮೂಲಕ ಮಹಿಳೆಯರ ಮನಸೆಳೆಯುತ್ತಿದೆ. ಸಾಮಾನ್ಯವಾಗಿ ಬರೀ ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರಿಸಲು ನಾವು ಲೆದರ್ ಜಾಕೆಟ್, ಲೆದರ್ ಕೋಟ್ ಮತ್ತು ಲೆದರ್ ಶೂಗಳನ್ನು ಧರಿಸುತ್ತಿದ್ದೆವು. ಈಗ ಲೆದರ್ ಶರ್ಟ್, ಪ್ಯಾಂಟ್, ಸ್ಕರ್ಟ್, ಟಾಪ್ ಎಲ್ಲವೂ ಲೆದರ್‌ಮಯವಾಗಿವೆ. ಜೊತೆಗೆ ಇದಕ್ಕೆ ಸೂಕ್ತವಾಗಿ ಮ್ಯಾಚ್ ಆಗುವಂಥ ಬೆಲ್ಟ್‌ಗಳೂ ಬಂದಿವೆ. ಅಲ್ಲದೆ ಆ್ಯಕ್ಸೆಸರೀಸ್ ಕೂಡ ಲೆದರ್ ಉಡುಪುಗಳ ಅಂದ ಹೆಚ್ಚಿಸಲು ಸಹಕಾರಿಯಾಗಿದೆ.

ಲೆದರ್ ಉಡುಪುಗಳು ಕಚೇರಿಗಳಿಗೆ ತೆರಳುವ ಮಹಿಳೆಯರು, ಶಾಪಿಂಗ್‌ಗೆ ಹೋಗುವಾಗ ಅಷ್ಟೇ ಅಲ್ಲದೆ ಶುಭ ಸಮಾರಂಭಗಳಿಗೂ ಧರಿಸಲು ಸೂಕ್ತವೆನಿಸಿವೆ. ಈ ಲೆದರ್ ಉಡುಪುಗಳು ಫ್ಯಾಷನ್ ಪ್ರಪಂಚದಲ್ಲಿ ಹೊಸ ಹವಾ ಸೃಷ್ಟಿಸಿವೆ.

ಕ್ಲಾಸಿಕ್ ಲುಕ್‌ಗೆ ಇನ್ನೊಂದು ಹೆಸರೇ ಲೆದರ್ ಎನ್ನುವಂತಾಗಿದೆ ಇದರ ವಿನ್ಯಾಸ. ಬಟ್ಟೆ ನುಣುಪಾಗಿದೆ. ರಿಚ್ ಲುಕ್ ಕೊಡುತ್ತದೆ. ಸುಮಾರು 80–90ರ ದಶಕದಲ್ಲಿ ಲೆದರ್ ಮಿನಿ ಹಾಗೂ ಲಾಂಗ್ ಸ್ಕರ್ಟ್‌ಗಳು, ಲೆದರ್ ಪ್ಯಾಂಟ್‌ಗಳು ಮತ್ತು ಲೆದರ್ ಜಾಕೆಟ್‌ಗಳು ಹೆಚ್ಚು ಜನಪ್ರಿಯವಾಗಿದ್ದವು. ಆಗ ಹಾಲಿವುಡ್, ಬಾಲಿವುಡ್ ತಾರೆಯರ ನೆಚ್ಚಿನ ಉಡುಪು ಇದಾಗಿತ್ತು. ಕೆಲ ಶ್ರೀಮಂತ ಯುವತಿಯರ ಮನೆಗಳ ವಾರ್ಡ್‌ರೋಬ್‌ಗಳಲ್ಲಿಯೂ ಲೆದರ್ ಉಡುಪಿನ ಕೆಲ ಮಾದರಿಗಳು ಇದ್ದವು. ಆಮೇಲೆ ಕೆಲಕಾಲ ಲೆದರ್ ಉಡುಪುಗಳು ಸದ್ದಿಲ್ಲದೆ ಕಣ್ಮರೆಯಾಗಿದ್ದವು. ಇದೀಗ ಹೊಸ ವಿನ್ಯಾಸ, ಹೊಸ ರೂಪದೊಂದಿಗೆ ಮತ್ತೆ ಬಾಲಿವುಡ್ ಅಂಗಳ ಅಷ್ಟೇ ಅಲ್ಲ ಮಹಿಳೆಯರ ಮನೆ ಮನಕ್ಕೆ ಕಾಲಿಟ್ಟಿವೆ.

## ಉಡುಪು ನಿರ್ವಹಣೆಗೆ ಕೆಲವೊಂದು ಟಿಪ್ಸ್

- ಲೆದರ್ ಉಡುಪುಗಳನ್ನು ಆದಷ್ಟು ನೆರಳಿನಲ್ಲೇ ಇರಿಸುವುದು ಸೂಕ್ತ. ಬಿಸಿಲಿನಿಂದ ಅದು ಬಣ್ಣ ಕಳೆದುಕೊಳ್ಳುತ್ತದೆ.
- ಈ ಉಡುಪುಗಳನ್ನು ಅತ್ಯಂತ ನಾಜೂಕಾಗಿ ನಿರ್ವಹಣೆ ಮಾಡಿದರೆ ದೀರ್ಘಕಾಲ ಬಾಳಿಕೆ ಬರುತ್ತದೆ.
- ಲೆದರ್ ಉಡುಪುಗಳು ಒದ್ದೆಯಾದರೆ ಅದನ್ನು ಒಣ ಬಟ್ಟೆಯಿಂದ ಒರೆಸಬೇಕು. ಇದನ್ನು ಒಣಗಿಸಲು ಯಾವುದೇ ಬಿಸಿಯಾದ ವಸ್ತು ಅಥವಾ ಇಸ್ತ್ರಿಪೆಟ್ಟಿಗೆ ಉಪಯೋಗಿಸಬಾರದು.
- ಲೆದರ್ ಉಡುಪುಗಳ ಮೇಲೆ ಯಾವುದೇ ಕಲೆ ಕಾಣಿಸಿಕೊಂಡರೆ ಅದನ್ನು ಮನೆಯಲ್ಲಿಯೇ ವಾಷ್ ಮಾಡಬಾರದು. ನುರಿತವರ ಸಲಹೆ ಪಡೆದು ಕಲೆ ತೆಗೆಸಬೇಕು. ಅಥವಾ ಡ್ರೈಕ್ಲೀನ್‌ಗೆ ಕೊಡಬೇಕು.
- ಕಾಲಕಾಲಕ್ಕೆ ಚರ್ಮದ ಉಡುಪುಗಳನ್ನು ಕಂಡೀಷನ್ ಮಾಡಲು ಉತ್ತಮ ಉತ್ಪನ್ನವನ್ನು ಬಳಸುವುದು ಒಳ್ಳೆಯದು. ಆಕಾರವನ್ನು ಕಾಪಾಡಿಕೊಳ್ಳಲು ನಿಮ್ಮ ಚರ್ಮದ ಬಟ್ಟೆ ಅಥವಾ ಚರ್ಮದ ಒಳ ಉಡುಪುಗಳನ್ನು ಅಗಲವಾದ ಮರದ ಅಥವಾ ಪ್ಲಾಸ್ಟಿಕ್ ಹ್ಯಾಂಗರ್‌ನಲ್ಲಿ ಹಾಕಿ.
- ಲೆದರ್ ಉಡುಪನ್ನು ಕಡಿಮೆ ತಾಪಮಾನದ ಪರಿಸರದಲ್ಲಿ ಅಂದರೆ, ತಂಪಾದ ಸ್ಥಳದಲ್ಲಿ ಶೇಖರಿಸಿಡಬೇಕಾಗುತ್ತದೆ.

### ಯುವತಿಯರ ಹಾಟ್ ಫೇವರೆಟ್

ನಟಿಯರ ಮೆಚ್ಚಿನ ಉಡುಗೆಯಲ್ಲಿ ಲೆದರ್ ಉಡುಪು ಕೂಡ ಒಂದಾಗಿದೆ. ವಸ್ತ್ರ ವಿನ್ಯಾಸಕಾರರು ಈ ಲೆದರ್ ಮೆಟೀರಿಯಲ್‌ನಲ್ಲಿಯೇ ಹಲವು ವಿಧದ ಉಡುಪುಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಈ ಉಡುಪುಗಳು ಯುವತಿಯರ ಹಾಟ್ ಫೇವರೆಟ್ ಎಂದೇ ಹೇಳಬಹುದು.

ಲೆದರ್ ಜಾಕೆಟ್ ಕೂಡ ಸದ್ಯಕ್ಕೆ ಟ್ರೆಂಡ್‌ನಲ್ಲಿದೆ. ಹಲವು ಬಣ್ಣಗಳಲ್ಲಿ ಸಿಗುವ ಈ ಜಾಕೆಟ್‌ಗಳನ್ನು ಲಾಂಗ್ ಸ್ಕರ್ಟ್‌ಗಳ ಜೊತೆಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿ ಧರಿಸಬಹುದು. ಇದು ಆಧುನಿಕ ಮತ್ತು ಸಾಂಪ್ರದಾಯಿಕ ಎರಡೂ ಮನೋಭಾವದ ಮಹಿಳೆಯರಿಗೆ ಇಷ್ಟವಾಗುವ ತೊಡುಗೆ. ಜೀನ್ಸ್ ಪ್ಯಾಂಟ್, ಡೆನಿಮ್ ಪ್ಯಾಂಟ್‌ಗಳ ಮೇಲೂ ಈ ತರಹದ ಜಾಕೆಟ್‌ಗಳನ್ನು ಧರಿಸಬಹುದು.

ಲೆದರ್ ಫ್ಯಾಬ್ರಿಕ್ ಮೇಲೆ ಎಂಬ್ರಾಯ್ಡರಿ ವರ್ಕ್ ಮಾಡಿದ ಉಡುಗೆಗಳು ನವೀನ ಲುಕ್ ಕೊಡಲು ಸಹಕಾರಿ. ಇವುಗಳಲ್ಲಿ ಮುಖ್ಯವಾಗಿ ಬ್ರೈಡಲ್‌ವೇರ್ ಜಾಕೆಟ್‌ಗಳು.

ಮದುವೆ ಸಮಾರಂಭಗಳಲ್ಲಿ ಗೌನ್‌ಗಳ ಮೇಲೆ ಬ್ಲಾಕ್ ಕಲರ್ ಎಂಬ್ರಾಯ್ಡರಿ ಮಾಡಿದ ಜಾಕೆಟ್‌ಗಳು, ಅದರಲ್ಲೂ ಗೋಲ್ಡನ್ ಅಥವಾ ಸಿಲ್ವರ್ ಎಂಬ್ರಾಯ್ಡರಿ ವರ್ಕ್ ಮಾಡಿದ ಜಾಕೆಟ್‌ಗಳು ಇದೀಗ ಟ್ರೆಂಡಿಯಾಗಿವೆ. ಬರೀ ಯುವತಿಯರಷ್ಟೇ ಅಲ್ಲದೆ ಯುವಕರೂ ಹಲವು ವಿನ್ಯಾಸದ ಲೆದರ್ ಜಾಕೆಟ್ ಹಾಗೂ ಪ್ಯಾಂಟ್‌ಗಳನ್ನು ಧರಿಸುತ್ತಿರುವುದು ಲೆದರ್ ಉಡುಪುಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಚಿಕ್ಕ ಮಕ್ಕಳ ಬಟ್ಟೆ ಮೇಲೆ ಲೆದರ್ ಒಂದು ಪೀಸ್‌ಗಳಿದ್ದರೆ ಸಾಕು. ಅದಕ್ಕೆ ಒಂದು ಹೊಸ ಲುಕ್ ತಾನಾಗಿಯೇ ಬರುತ್ತದೆ.

ಇವಿಷ್ಟೇ ಅಲ್ಲದೆ ಎಲ್ಲಾ ಉಡುಪುಗಳ ಮೇಲೆ ಮ್ಯಾಚ್ ಆಗುವ ಲೆದರ್ ಬೆಲ್ಟ್‌ಗಳೂ ಫ್ಯಾಷನಬಲ್ ಆಗಿದ್ದು, ಧರಿಸಲೂ ಆರಾಮದಾಯಕವಾಗಿವೆ.